# ALL INDIA RADIO- DHARWAD
## PRADESH SAMACHARA (KANNADA)
**JANUARY 21, 2026 7:05 AM**

**ಮುಖ್ಯಾಂಶಗಳು**

- **ಜ್ಞಾನಾಧಾರಿತ ಆರ್ಥಿಕತೆಯಿಂದ** ನಾವೀನ್ಯತೆ ಆಧಾರಿತ ಶಕ್ತಿಯಾಗಿ ಭಾರತ ರೂಪುಗೊಳ್ಳಬೇಕು: ರಾಜ್ಯಪಾಲರ ಅಭಿಮತ.
- **ಪೊಲೀಸ್ ಇಲಾಖೆಯಲ್ಲಿ** 10 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ–ಗೃಹ ಸಚಿವರ ಹೇಳಿಕೆ.
- **ಪೂರ್ವ–ಸಮ್ಮಿಟ್** ಕಾರ್ಯಪಡೆ ಸಭೆಯಲ್ಲಿ ನಾಗರಿಕ–ಕೇಂದ್ರಿತ ಎಐಗಾಗಿ ನೀಲನಕ್ಷೆ ಅನಾವರಣ.
- **ಇದೇ 24 ರಿಂದ 27 ರವರೆಗೆ** ನಾಲ್ಕು ದಿನಗಳ ಕಾಲ ಶಿವಮೊಗ್ಗದಲ್ಲಿ ಮಲೆನಾಡು ಕರಕುಶಲ ಉತ್ಸವ, ಸಿರಿಧಾನ್ಯ ಮೇಳ–ಫಲ ಪು ್ಪ ಪ್ರದರ್ಶನ.

**ಈಗ ವಾರ್ತೆಗಳ ವಿವರ**

*******

**ಗ್ರಾಮೀಣಾಭಿವೃದ್ಧಿ, ಆರೋಗ್ಯ,** ಶಿಕ್ಷಣ, ಪರಿಸರ ಮತ್ತು ಡಿಜಿಟಲ್ ಸೇರ್ಪಡೆಯಂತಹ ಸವಾಲುಗಳಿಗೆ ಪರಿಹಾರಗಳನ್ನು ನೀಡುವ ನವೋದ್ಯಮಗಳನ್ನು ವಿಶ್ವವಿದ್ಯಾಲಯಗಳು ಪ್ರೋತ್ಸಾಹಿಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದ್ದಾರೆ. ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ ವತಿಯಿಂದ ಆಯೋಜಿಸಿದ್ದ ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ದಕ್ಷಿಣ ವಲಯದ ಕುಲಪತಿಗಳ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ...ವಿಶ್ವವಿದ್ಯಾಲಯಗಳು ಉದ್ಯಮಶೀಲತೆಯ ಕೇಂದ್ರಗಳಾದಾಗ ಮಾತ್ರ ಭಾರತವು ಜ್ಞಾನಾಧಾರಿತ ಆರ್ಥಿಕತೆಯಿಂದ ನಾವೀನ್ಯತೆ ಆಧಾರಿತ ಸೂಪರ್ ಪವರ್‌ನೆಡೆಗೆ ಚಲಿಸುತ್ತದೆ. ಯುವಜನತೆ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸುವಂತೆ ಮಾಡಲು, ಅವರಿಗೆ ಇತ್ತೀಚಿನ ಜ್ಞಾನ ಮತ್ತು ತಂತ್ರಜ್ಞಾನವನ್ನು ಪರಿಚಯಿಸುವ ಅವಶ್ಯಕತೆಯಿದೆ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟರು.

*******

**ಪೊಲೀಸ್ ಇಲಾಖೆಯಲ್ಲಿ 15** ಸಾವಿರ ಹುದ್ದೆಗಳು ಖಾಲಿಯಿದ್ದು ಈ ಬಾರಿ 10 ಸಾವಿರ ಹುದ್ದೆಗಳನ್ನು ಭರ್ತಿಮಾಡಲು ಕ್ರಮವಹಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ತಿಳಿಸಿದ್ದಾರೆ. ಕೆ.ಜಿ.ಎಫ್ ನಲ್ಲಿ 100 ಎಕರೆ ಜಾಗದಲ್ಲಿ ಸುಮಾರು 530 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಿಸರ್ವ್ ಬೆಟಾಲಿಯನ್‌ಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ಈ

ಬಾರಿಯ ಬಜೆಟ್‌ನಲ್ಲಿ 10 ಸಾವಿರ ಹುದ್ದೆಗಳ ನೇಮಕಾತಿ ಕುರಿತು ಘೋಷಿಸುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಲಾಗಿದೆ ಎಂದು ಸಚಿವರು ಹೇಳಿದರು.

*******

**ಅಲ್ಪಸಂಖ್ಯಾತ ಮಕ್ಕಳ ಶಿಕ್ಷಣಕ್ಕೆ** ರಾಜ್ಯ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಿದ್ದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ 4 ಸಾವಿರದ 500 ಕೋಟಿ ರೂಪಾಯಿಯ ಅನುದಾನ ಒದಗಿಸಿದೆ ಎಂದು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವ ಜಮೀರ ಅಹ್ಮದ್ ಹೇಳಿದ್ದಾರೆ. ಗದಗನಲ್ಲಿ ಮೌಲಾನಾ ಅಜಾದ ಪಬ್ಲಿಕ್ ಶಾಲೆಯ ನೂತನ ಕಟ್ಟಡದ ಲೋಕಾರ್ಪಣೆ ಹಾಗೂ ಹೆಚ್ಚುವರಿ ತರಗತಿಗಳ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ 2 ಲಕ್ಷ 38 ಸಾವಿರ ಅಲ್ಪಸಂಖ್ಯಾತ ಮಕ್ಕಳು ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇನ್ನು ಅನೇಕ ವಸತಿ ಶಾಲೆಗಳನ್ನು ಆರಂಭಿಸಲು ಮುಖ್ಯಮಂತ್ರಿ ಚಾಲನೆ ನೀಡಿದ್ದಾರೆ ಎಂದರು.

*******

**ಶಿಲ್ಪಕಲೆಗೆ ಹೆಸರುವಾಸಿಯಾಗಿರುವ** ಗದಗ ಜಿಲ್ಲೆಯ ಲಕ್ಕುಂಡಿಯ ಗ್ರಾಮದಲ್ಲಿ ನಡೆಯುತ್ತಿರುವ ಉತ್ಖನನ ಕಾರ್ಯ ಐದನೆಯ ದಿನಕ್ಕೆ ಕಾಲಿಟ್ಟಿದ್ದು, ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದಿರುವ ಉತ್ಖನನ ಕಾರ್ಯದಲ್ಲಿ ನಿನ್ನೆ ಪುರಾತನ ಕಾಲದ ಮಡಿಕೆಯ ಚೂರುಗಳು ಮತ್ತು ಲೋಹದ ಗಂಟೆ ಪತ್ತೆಯಾಗಿದೆ. ಇಲ್ಲಿಯವರೆಗೆ ಐದು ಅಡಿಗಳಗ ಷ್ಟ ಉತ್ಖನನ ಮಾಡಲಾಗಿದ್ದು, ಭೂ ಗರ್ಭದಲ್ಲಿ ಹುದುಗಿರುವ ಐತಿಹಾಸಿಕ ಪ್ರಸಿದ್ಧ ಶಿಲಾ ಶಿಲ್ಪ ಕಲೆಯನ್ನು ಒಳಗೊಂಡ ದೇವಸ್ಥಾನಗಳು ಮತ್ತು ಕಲ್ಯಾಣಿಗಳನ್ನು ಹೊರ ಜಗತ್ತಿಗೆ ಪರಿಚಯಿಸುವುದರ ಜೊತೆ, ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿಸುವ ಉದ್ದೇಶದಿಂದ ಲಕ್ಕುಂಡಿ ಗ್ರಾಮದ ಪರಿಸರದಲ್ಲಿ ಉತ್ಖನನ ಪ್ರಾರಂಭಿಸಲಾಗಿದೆ ಎಂದು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

*******

**ಗದಗ ಜಿಲ್ಲೆ ಲಕ್ಕುಂಡಿಯನ್ನು** ವಿಶ್ವ ಪಾರಂಪರಿಕ ಸ್ಥಳವಾಗಿ ಘೋಷಿಸುವ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಹೇಳಿದ್ದಾರೆ. ಬಾಗಲಕೋಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಮುಖ್ಯಮಂತ್ರಿ ಅವರು ಲಕ್ಕುಂಡಿ ಉತ್ಖನನಕ್ಕೆ ಚಾಲನೆ ನೀಡಿದ್ದು, ಕಳೆದ ನಾಲ್ಕು ದಿನಗಳಲ್ಲಿ ದೊರೆತಿರುವ ವಸ್ತುಗಳು ಭೂಮಿಯ ಮೇಲ್ಮೈ ಭಾಗದಲ್ಲೇ ಪತ್ತೆಯಾಗಿವೆ. ಮುಂದಿನ ದಿನಗಳಲ್ಲಿ ಭೂಮಿಯ ಆಳದಲ್ಲಿ ಇನ್ನೂ ಅಪಾರ ಪ್ರಮಾಣದ ಪಾರಂಪರಿಕ, ಐತಿಹಾಸಿಕ ಹಾಗೂ ಕಲಾ ಸ್ಮಾರಕಗಳು ಪತ್ತೆಯಾಗುವ ನಿರೀಕ್ಷೆಯಿದೆ ಎಂದು ಸಚಿವರು ಹೇಳಿದರು.

*******

**ರಾಜ್ಯ ಕೊಳಗೇರಿ ಅಭಿವೃದ್ಧಿ** ಮಂಡಳಿಯಿಂದ ಹುಬ್ಬಳ್ಳಿಯಲ್ಲಿ ನಿರ್ಮಿಸಿರುವ ಸಾವಿರಾರು ಮನೆಗಳ ಹಸ್ತಾಂತರಕ್ಕೆ ಸಿದ್ಧತೆಗಳು ಭರದಿಂದ ಸಾಗಿದ್ದು, ಕಾರ್ಮಿಕ ಸಚಿವ ಸಂತೋ ್ ಲಾಡ್ ಕಾರ್ಯಕ್ರಮದ ಸಿದ್ಧತೆ ಕುರಿತು ನಿನ್ನೆ ಪರಿಶೀಲನೆ ನಡೆಸಿದರು. ನಂತರ

ಮಾತನಾಡಿದ ಅವರು, ಮುಂಬರುವ ಬಜೆಟ್ಟಿನಲ್ಲಿ ಗ್ರಾಮೀಣ ಭಾಗದ ಜನರಿಗೂ ಸಹ ಮನೆಗಳನ್ನು ನೀಡುವ ಯೋಜನೆ ರೂಪಿಸಲಾಗುವುದು. ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಇದೇ 24 ರಂದು 42,345 ಬಡ ಕುಟುಂಬಗಳಿಗೆ ಮನೆಗಳ ಹಂಚಿಕೆ ಮಾಡಲಾಗುವುದು. ಕಾರ್ಯಕ್ರಮದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ಆಗಮಿಸುವ ನಿರೀಕ್ಷೆ ಇದೆ ಎಂದರು.

*******

**ಜಾಗತಿಕ ಬೇಡಿಕೆಯನ್ನು** ಪೂರೈಸಲು, ಭವಿ ್ಯದಲ್ಲಿ ಸಿದ್ಧವಾಗಿರುವ ಕಾರ್ಯಪಡೆಯನ್ನು ಖಚಿತಪಡಿಸಿಕೊಳ್ಳಲು, ರಾಜ್ಯದ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಎಐ ಪಠ್ಯಕ್ರಮ ಅಳವಡಿಸುವ ಕಾರ್ಯತಂತ್ರ ರೂಪಿಸಲಾಗಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ ಉನ್ನತ ಮಟ್ಟದ ಎಐ ಇಂಪ್ಯಾಕ್ಟ್ ಪೂರ್ವ–ಸಮ್ಮಿಟ್ ಕಾರ್ಯಪಡೆ ಸಭೆಯಲ್ಲಿ ಮಾತನಾಡಿದ ಅವರು ರಾಜ್ಯ ಆಡಳಿತದಲ್ಲಿ ಕೃತಕ ಬುದ್ಧಿಮತ್ತೆಗಾಗಿ ಮಾರ್ಗಸೂಚಿಯನ್ನು ರೂಪಿಸಲು ಈ ಅಧಿವೇಶನ ಒಂದು ವೇದಿಕೆಯಾಗಿದೆ ಎಂದರು. ರಾಜ್ಯವು ಸೈಲೋಡ್ ಡೇಟಾ ನಿರ್ವಹಣೆಯಿಂದ ಪರಸ್ಪರ ಕಾರ್ಯನಿರ್ವಹಿಸಬಹುದಾದ ಡೇಟಾ ಲೇಕ್ ಆರ್ಕಿಟೆಕ್ಚರ್‌ಗೆ ಬದಲಾಗುತ್ತಿವೆ. ಪ್ರಸ್ತುತ, ರೈತರು, ವಿದ್ಯಾರ್ಥಿಗಳು, ಭೂಮಿ ಮತ್ತು ಬೆಳೆಗಳಿಗೆ ಪ್ರತ್ಯೇಕ ಡೇಟಾಸೆಟ್‌ಗಳು ಅಸ್ತಿತ್ವದಲ್ಲಿದ್ದು, ಅವುಗಳ ಮೌಲ್ಯವನ್ನು ಸೀಮಿತಗೊಳಿಸುತ್ತವೆ ಎಂದು ಅವರು ಹೇಳಿದರು.

*******

**ಈಗ ಪ್ರಕಟಣೆ ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು..**

**ಪ್ರಕಟಣೆ–42 ಸೆಕೆಂಡ್ಸ್**

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ**

*******

**ಧಾರವಾಡ ಜಿಲ್ಲೆ, ತಡಕೋಡದ** ಪ್ರಗತಿಪರ ಕೃಷಿಕ, ಮನೋಹರ ದೇಸಾಯಿ. ಕಳೆದ ಮೂರು ದಶಕಗಳಿಂದ, ಹಲವು ಪ್ರಜಾತಿಯ ಹೂವು ಹಾಗೂ ಬೀಜಗಳನ್ನು, ನೈಸರ್ಗಿಕ ಕೃಷಿಯಲ್ಲಿ ಪೋಷಿಸಿ, ಫ್ರಾನ್ಸ್, ಅಮೆರಿಕ, ಜರ್ಮನಿ, ಬ್ರೆಜಿಲ್ ಸೇರಿದಂತೆ 10 ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಮಾಡುತ್ತಿದ್ದಾರೆ.

ಎಪ್ಪತ್ತು ಎಕರೆಯಲ್ಲಿ ಬೀಜೋತ್ಪಾದನೆ ಮೂಲಕ, ನೂರಾರು ಜನರಿಗೆ ಉದ್ಯೋಗ ನೀಡಿರುವ ಮೂಲತಃ ಗದಗ ಜಿಲ್ಲೆ, ಅಣ್ಣಿಗೇರಿ ತಾಲೂಕು, ಹಳ್ಳಿಕೇರಿ ಗ್ರಾಮದ ಮನೋಹರ ದೇಸಾಯಿ ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.....

**ಧ್ವನಿ–ಮನೋಹರ ದೇಸಾಯಿ– 55 ಸೆಕೆಂಡ್ಸ್**

*******

**ಇದೇ 24 ರಿಂದ 27 ರವರೆಗೆ** ನಾಲ್ಕು ದಿನಗಳ ಕಾಲ ಶಿವಮೊಗ್ಗದ ಅಲ್ಲಮ ಪ್ರಭು ಉದ್ಯಾನವನದಲ್ಲಿ ಮಲೆನಾಡು ಕರಕುಶಲ ಉತ್ಸವ–ಸಿರಿಧಾನ್ಯ ಮೇಳ–ಫಲ ಪು ್ಪ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಸಿಇಓ ಹೇಮಂತ್ ಎನ್ ತಿಳಿಸಿದ್ದಾರೆ. ಪ್ರದರ್ಶನದಲ್ಲಿ ಸುಮಾರು 2 ಲಕ್ಷ ವಿವಿಧ ಬಣ್ಣದ ಹೂವುಗಳನ್ನು ಬಳಸಿ, ವಿಶೇ ವಾದ ಕಲಾಕೃತಿಗಳನ್ನು

ರಚಿಸಲಾಗುತ್ತದೆ. ವಿವಿಧ ಜಾತಿಯ ಹೂವುಗಳಿಂದ 16 ಅಡಿ ಎತ್ತರದ ಕೋಟೆ ಹಾಗೂ ಕೆಳದಿ ಶಿವಪ್ಪ ನಾಯಕನ ಪ್ರತಿಮೆ ರಚನೆ, 15 ಅಡಿ ಎತ್ತರದ ಬಳ್ಳಿಗಾವಿ ಕೇದಾರೇಶ್ವರ ದೇವಸ್ಥಾನ ರಚನೆ ಈ ಬಾರಿಯ ಆಕ ರ್ಷಣೆಗಳಾಗಿವೆ ಎಂದು ಮಾಹಿತಿ ನೀಡಿದ್ದಾರೆ.

*******

**ಭಾರತೀಯ ರೇಲ್ವೆ ವಿಭಾಗಗಳು** ಮತ್ತು ಘಟಕಗಳಲ್ಲಿ ಅನುಕರಣೀಯ ಕಾರ್ಯಕ್ಷಮತೆ ಗುರುತಿಸಲು ವಿಶಿ ಷ್ಟ ರೈಲು ಸೇವಾ ಪುರಸ್ಕಾರ ಮತ್ತು ರೈಲು ಸೇವಾ ಪುರಸ್ಕಾರವನ್ನು, ನೈಋತ್ಯ ರೈಲ್ವೆಯ ಜನರಲ್ ಮ್ಯಾನೇಜರ್ ಮುಕುಲ್ ಸರನ್ ಮಾಥುರ್, ನಿನ್ನೆ ಹುಬ್ಬಳ್ಳಿಯ ಚಾಲುಕ್ಯ ರೈಲ್ವೆ ಸಂಸ್ಥೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರದಾನ ಮಾಡಿದರು. ಕಾರ್ಯಾಚರಣೆ ದಕ್ಷತೆ ಶೀಲ್ಡ್ ಮತ್ತು ಅಂತರ–ವಿಭಾಗೀಯ ರಾಜಭಾ ಷಾ ರೋಲಿಂಗ್ ಶೀಲ್ಡ್‌ಗೆ ಹುಬ್ಬಳ್ಳಿ ವಿಭಾಗ ಭಾಜನವಾದವು. ಹುಬ್ಬಳ್ಳಿ–ಎಂಜಿಆರ್ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್‌ಗೆ ಅತ್ಯುತ್ತಮ ನಿರ್ವಹಣೆಯ ರೇಕ್ ಪ್ರಶಸ್ತಿ ದೊರೆತರೆ, ಉತ್ತಮ ನಿರ್ವಹಣೆಯ ರನ್ನಿಂಗ್ ರೂಮ್ ಶೀಲ್ಡ್‌ಗೆ ಧಾರವಾಡ ರೈಲ್ವೆ ನಿಲ್ದಾಣ ಭಾಜನವಾಯಿತು

*******

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

**ಜ್ಞಾನಾಧಾರಿತ ಆರ್ಥಿಕತೆಯಿಂದ** ನಾವೀನ್ಯತೆ ಆಧಾರಿತ ಶಕ್ತಿಯಾಗಿ ಭಾರತ ರೂಪುಗೊಳ್ಳಬೇಕು: ರಾಜ್ಯಪಾಲರ ಅಭಿಮತ.

**ಪೊಲೀಸ್ ಇಲಾಖೆಯಲ್ಲಿ** 10 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ–ಗೃಹ ಸಚಿವರ ಹೇಳಿಕೆ.

**ಪೂರ್ವ–ಸಮ್ಮಿಟ್** ಕಾರ್ಯಪಡೆ ಸಭೆಯಲ್ಲಿ ನಾಗರಿಕ–ಕೇಂದ್ರಿತ ಎಐಗಾಗಿ ನೀಲನಕ್ಷೆ ಅನಾವರಣ.

**ಇದೇ 24 ರಿಂದ 27 ರವರೆಗೆ** ನಾಲ್ಕು ದಿನಗಳ ಕಾಲ ಶಿವಮೊಗ್ಗದಲ್ಲಿ ಮಲೆನಾಡು ಕರಕುಶಲ ಉತ್ಸವ, ಸಿರಿಧಾನ್ಯ ಮೇಳ–ಫಲ ಪು ಷ್ಪ ಪ್ರದರ್ಶನ.

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಿಗ್ಗೆ 7 ಗಂಟೆ 35 ನಿಮಿಷಕ್ಕೆ**